https://www.uomonline.com

**73207** **M-608**

Sl.No.

**Total No. of Pages : 3**

**ಮೂರನೆಯ ಚತುರ್ಮಾಸ ಬಿ.ಕಾಂ./ಬಿ.ಬಿ.ಎ./ಬಿ.ಟಿ.ಎಚ್. ಪರೀಕ್ಷೆ, ಮಾರ್ಚ್/ಏಪ್ರಿಲ್ 2021**

**(ಚತುರ್ಮಾಸ ಸ್ಕೀಮ್ : ಸಿಬಿಸಿಎಸ್)**

**ಕನ್ನಡ ಭಾಷೆ (ಪತ್ರಿಕೆ–೩) (2019-20 ಮತ್ತು 2020-21 ರ ವಿದ್ಯಾರ್ಥಿಗಳಿಗೆ)**

**ಕಾವ್ಯಭಾಗ–೧ ಮತ್ತು ಕಥನ ಭಾಗ**

**ಸಮಯ: 3 ಗಂಟೆಗಳು** **ಗರಿಷ್ಠ ಅಂಕಗಳು : 80**

**ಕಾವ್ಯ ಭಾಗ (50 ಅಂಕಗಳು)**

*ಪ್ರ1)* ಅ) ಒಂದು ಪದ್ಯಭಾಗದ ಭಾವವನ್ನು ಸಂದರ್ಭ ಸಹಿತ ವಿವರಿಸಿ: **[5]**

೧) ಮಲೆತು ಬೆನ್ನಟ್ಟುವ ಮಹಾರಿಷಡುವರ್ಗಮಂ
ಗೆಲಲಱಿಯದವನಾವ ಹಗೆಗಳಂ ಗೆಲುವೆ ನಿ
ನ್ನೊಳಗೆ ಕರಣವ ಸಂತವಿಡಲಱಿಯದವನಾವ ದೇಶವಂ ಸಂತವಿಡುವೆ

ಸಲೆ ತಪಸ್ತೇಜದಿಂ ಪುರುಷಾರ್ಥಕೋಶಮಂ
ಬಳಸಲಱಿಯದವನಾವ ತೇಜದಿಂ ಕೋಶಮಂ
ಬಳಸಿದಪೆ ಕಂಗೆಟ್ಟು ಕಡುಪಾಪಿ ಮೂರ್ಖ ಕೌಶಿಕ ಕೇಳು ಕೇಳೆಂದರು

೨) ಪಣದಾಸೆ ನಂಟುತನದ ಪತ್ತುಗೆ ನೇಹ
ದೆಣಿಕೆಗಳಿಂದೆದೆಗರಗಿ
ಗುಣ ಜವ್ವನ ಕುಲ ರೂಪುಗುಂದಿದ ನೆಡೆ
ವೆಣಕೀಯಲಾಗದು ಪೆಣ್ಣ.

ಆ) ಒಂದು ವಾಕ್ಯದಲ್ಲಿ ಉತ್ತರಿಸಿ: **[5×1=5]**

೧) ಅಳುವ ಕಂದನ ಕುಡಿಹುಬ್ಬನ್ನು ಯಾವುದಕ್ಕೆ ಹೋಲಿಸಲಾಗಿದೆ?

೨) ಮಯೂರಧ್ವಜನ ರಾಣಿಯ ಹೆಸರೇನು?

೩) ಜೇಡರ ದಾಸಿಮಯ್ಯನ ವಚನಗಳ ಅಂಕಿತ ಯಾವುದು?

೪) ಮಾದೇವಿಯನ್ನು ಕಂಡು ಮೋಹಪರವಶನಾದ ದೊರೆ ಯಾರು?

೫) ಹರಿಶ್ಚಂದ್ರ ಮಹಾರಾಜ ಆಳುತ್ತಿದ್ದ ರಾಜ್ಯ ಯಾವುದು?

***P.T.O.***

https://www.uomonline.com
https://www.uomonline.com
https://www.uomonline.com

https://www.uomonline.com



ಪ್ರ2) ಮೂರು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ: [3×4=12]

೧) ಕೊಡುವನಿರೆ ತನಗೆ ಬೇಕಾದುದಂ ಬೇಡುವಂ ಬಿಡುವನೇ

೨) ನಾ ಹೆಚ್ಚೊ ನಿನ್ನ ತವರ್ಹೆಚ್ಚೊ.

೩) ಎನ್ನ ಕಾಲೊಳಗಣ ಮುಳ್ಳ ನಾನೆ ತೆಗೆಯಬೇಕು.

೪) ಪೆಣ್ಣಿಂದ ಜನಕರಾಯನು ಜಸವಡೆದನು.

೫) ನಮಗೆ ನಿಮ್ಮಯ ಸಂಗವಳವಡದು

ಪ್ರ3) ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: [2×2=4]

ಅಮುಗೆ ರಾಯಮ್ಮ, ವಿಶ್ವಾಮಿತ್ರ, ಮಾದೇವಿ, ಹಿಮವಂತ.

ಆ) ಒಂದು ವಿಷಯ ಕುರಿತು ಸ್ವಂತ ಅಭಿಪ್ರಾಯವನ್ನು ಬರೆಯಿರಿ: [4]

೧) ಜನಪದರು ತಿಳಿಸುವ ದಾಂಪತ್ಯ ಸಾಮರಸ್ಯದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

೨) "ಪ್ರಜಾ ಪ್ರೇಮಿಯಾದ ರಾಜನನ್ನು ಪ್ರಜೆಗಳು ಆರಾಧಿಸುವುದರಲ್ಲಿ ತಪ್ಪಿಲ್ಲ"-ಈ ಹೇಳಿಕೆಗೆ ನಿಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ.

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) 'ಮಯೂರಧ್ವಜ ಕೇವಲ ಯುದ್ಧವೀರನಲ್ಲ ಮಹಾ ದಾನವೀರ'-ಈ ಹೇಳಿಕೆಯನ್ನು ಸಮರ್ಥಿಸಿ.

೨) ತಾಯಿ-ತವರು-ಮಕ್ಕಳನ್ನು ಕುರಿತ ಜನಪದರ ಭಾವನೆಗಳ ವೈಶಿಷ್ಟ್ಯವನ್ನು ವಿವರಿಸಿ.

ಪ್ರ5) ಎರಡು ಪ್ರಶ್ನೆಗಳಿಗೆ ಉತ್ತರಿಸಿ: [2×5=10]

೧) ಆಸೆಯ ಸ್ವರೂಪದ ಬಗ್ಗೆ ಅಲ್ಲಮಪ್ರಭುದೇವರ ನಿಲುವೇನು? ತಿಳಿಸಿ.

೨) ಮಾದೇವಿಯ ವ್ಯಕ್ತಿತ್ವದ ಅನನ್ಯತೆಯನ್ನು ಕುರಿತು ಬರೆಯಿರಿ.

೩) ಹೆಣ್ಣುಮಕ್ಕಳ ವೈಶಿಷ್ಟ್ಯವನ್ನು ಹೊನ್ನಮ್ಮ ನಿರೂಪಿಸಿರುವ ಬಗೆಯನ್ನು ತಿಳಿಸಿ.

೪) ಹರಿಶ್ಚಂದ್ರನನ್ನು ಕಂಡ ಪುರಜನರ ಮನಸ್ಥಿತಿಯ ಸ್ವರೂಪವನ್ನು ವಿವರಿಸಿ.

https://www.uomonline.com

https://www.uomonline.com

https://www.uomonline.com

https://www.uomonline.com

**73207** **M-608**

ಕಥನ ಭಾಗ (30 ಅಂಕಗಳು)

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಪಶ್ಚಿಮ ಘಟ್ಟಗಳ ರಕ್ಷಣೆಗೆ ಅರಣ್ಯ ಮತ್ತು ಯೋಜನಾ ಇಲಾಖೆಗಳು ರೂಪಿಸಿರುವ ಯೋಜನೆಗಳು ಹಾಗೂ ಪರಿಣಾಮಗಳನ್ನು ವಿವರಿಸಿ.

೨) ಲಂಡನ್ನಿನ ಸಾರಿಗೆ ವ್ಯವಸ್ಥೆ ಹಾಗೂ ಮ್ಯೂಸಿಯಂನ ಸ್ವರೂಪದ ಬಗ್ಗೆ ಬರೆಯಿರಿ.

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) 'ಮನುಷ್ಯನಿಗೆ ದುಡ್ಡು ನೆಮ್ಮದಿಯನ್ನು ತರುವುದಿಲ್ಲ' ಎಂಬುದನ್ನು ಲೇಖಕರು ಪ್ರತಿಪಾದಿಸಿರುವ ಬಗೆಯನ್ನು ವಿವರಿಸಿ.

೨) ಮಿಂಚಗಲ್ ಗೊಲ್ಲಳ್ಳಿಯ ಜಾತ್ರೆಯ ಸ್ವರೂಪ ಮತ್ತು ಮೀನು ಶಿಕಾರಿಯ ವೈಶಿಷ್ಟ್ಯವನ್ನು ಕುರಿತು ಬರೆಯಿರಿ.

ಪ್ರ8) ಎರಡನ್ನು ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ: [2×5=10]

೧) ರಾಮು ಮತ್ತು ಶಾರದೆಯರ ಮನೆಯಲ್ಲಿ ಅತ್ತೆ ಗಂಗಮ್ಮನಿಗಾದ ಅನುಭವಗಳನ್ನು ತಿಳಿಸಿ.

೨) ಪಶ್ಚಿಮ ಘಟ್ಟಗಳಲ್ಲಿರುವ ಜೀವರಕ್ಷಕ ಸಂಪನ್ಮೂಲಗಳನ್ನು ಪರಿಚಯಿಸಿ.

೩) ಲಂಡನ್ನಿನ ಗಾರ್ಡ್ ಮ್ಯೂಸಿಯಂನ ವೈಶಿಷ್ಟ್ಯವನ್ನು ಕುರಿತು ಬರೆಯಿರಿ.

೪) 'ಕುಣಿಯುವ ಕುರುಡು ಕಾಂಚಾಣ' ಪ್ರಬಂಧದಲ್ಲಿ ಉಲ್ಲೇಖಿತವಾಗಿರುವ ಅತುಲ್ ಶಾನ ವ್ಯಕ್ತಿತ್ವವನ್ನು ನಿರೂಪಿಸಿ.

✡ ✡ ✡

https://www.uomonline.com
https://www.uomonline.com
https://www.uomonline.com